ಕರ್ನಾಟಕ ವಿಧಾನಪರಿಷತ್ತು

ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 24-03-2021 ಪ್ರಶ್ನೆ ಸಂಖ್ಯೆ : 1779 (2002)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಯು.ಬಿ. ವೆಂಕಟೇಶ್(ನಾಮನಿರ್ದೇಶನ ಹೊಂದಿದವರು)

ಉತ್ತರ ನೀಡಬೇಕಾದ ದಿನಾಂಕ : 24-03-2021

ಉತ್ತರಿಸುವ ಸಚಿವರು: ಮಾನ್ಯ ಮುಜರಾಯಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ವಿಷಯ : ನೇಮಕಾತಿ ಪ್ರಾಧಿಕಾರದಿಂದ ಮೀಸಲಾತಿ ಪ್ರಕಾರ ಆಯಾಯಾ ವರ್ಗಗಳ ಅಭ್ಯರ್ಥಿಗಳ ನೇಮಕಾತಿ ನಡೆಯದಿರುವುದರ ತನಿಖೆ ಕುರಿತು

(ಅ) ನೇಮಕಾತಿ ಪ್ರಾಧಿಕಾರಿಗಳು ಹಿಂದುಳಿದ ವರ್ಗಗಳಿಗೆ ಸರ್ಕಾರ ನಿಗದಿಪಡಿಸಿರುವ ಮೀಸಲಾತಿ ಪ್ರಕಾರ ಆಯಾ ವರ್ಗಗಳಿಗೆ ಮೀಸಲಾತಿ ನೀಡಿರುವ ಬಗ್ಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ತನಿಖೆ ಮಾಡಲು ಪ್ರತ್ಯೇಕ ವಿಭಾಗವಿದೆಯೇ ;

(ಆ) ಹಾದ್ದಲ್ಲಿ, ಕಳೆದ ಮೂರು ವರ್ಷಗಳಲ್ಲಿ ಎಷ್ಟು ಘಟಕ-ಕಛೇರಿಗಳನ್ನು ತಪಾಸಣೆ ಮಾಡಲಾಗಿದೆ ; (ವರ್ಷವಾರು ವಿವರಗಳನ್ನು ನೀಡುವುದು)

(ಇ) ಯಾವ ಯಾವ ಇಲಾಖೆಗಳಲ್ಲಿ ಮೀಸಲಾತಿ ವಿಚಲನೆ ಆಗಿದೆ; ಅವರ ಮೇಲೆ ಕೈಗೊಂಡಿರುವ ಕ್ರಮಗಳೇನು ;

(ಈ) ಇಲಾಖೆ ಆಯುಕ್ತರು ಮೀಸಲಾತಿ ಬಗ್ಗೆ ಎಷ್ಟು ಘಟಕ-ಕಛೇರಿಗಳ ಪರಿಶೀಲನೆ ಮಾಡಿರುತ್ತಾರೆ; ಮಾಡದಿದ್ದಲ್ಲಿ ಕಾರಣವನ್ನು ತಿಳಿಸುವುದು ?